142 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ಡಾ॥ ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೆಂಗಳೂರು ನಗರದ ಮೇಯೋಹಾಲ್‌ನಲ್ಲಿ ನಾಡ ಪ್ರಭು ಕೆಂಪೇಗೌಡರ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ಕೋಟಿ ರೂ.ಗಳನ್ನು ತೆಗೆದಿರಿಸಲಾಗಿದ್ದಿದ್ದು ನಿಜವೇ;

ನಿಜ

ಆ) ಈ ಹಣವನ್ನು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಲಾಗಿದೆಯೇ; ಇಲ್ಲವಾದಲ್ಲಿ ವರ್ಗಾಯಿಸದೇ ಇರುವುದಕ್ಕೆ ಕಾರಣಗಳೇನು;

ಇಲ್ಲ. ಕೆಂಪೇಗೌಡರ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸುವ ಬಗ್ಗೆ ಸಮಗ್ರ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರನ್ನು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿದ್ದು, ಅವರಿಂದ ಪ್ರಸ್ತಾವನೆ ಬಾರದಿದ್ದ ಕಾರಣ ಹಣವನ್ನು ನಗರಾಭಿವೃದ್ಧಿ ಇಲಾಖೆಗೆ ವರ್ಗಾಯಿಸಲಾಗಿಲ್ಲ.

ಇ) ಈ ಕೆಂಪೇಗೌಡ ವಸ್ತು ಸಂಗ್ರಹಾಲಯವನ್ನು ಯಾವಾಗ ಜನತೆಯ ದರ್ಶಕ್ಕೆ ಸಮರ್ಪಿಸಲಾಗುವುದು/

ಉದ್ಭವಿಸುವುದಿಲ್ಲ.

143 ಶ್ರೀ ಬಾಲಕೃಷ್ಣ ಹೆಚ್.ಸಿ.

ಬಿ.ಎಸ್.ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು)

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಯಾವ ದಿನಾಂಕದಿಂದ ಜಾರಿಗೆ ಬರುವಂತೆ 58 ವರ್ಷದಿಂದ 60 ವರ್ಷಕ್ಕೆ ಏರಿಸಲಾಗಿದೆ. ಈ ಆದೇಶದ ರೂಪುರೇಷೆಗಳೇನು;

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 44 ಸೇನಿಸಿ 2008 ದಿನಾಂಕ 28.7.2008 ರಲ್ಲಿ ದಿನಾಂಕ 17.7.2008 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 58 ವರ್ಷಗಳಿಂದ 60 ವರ್ಷಗಳಿಗೆ ಹೆಚ್ಚಿಸಲಾಗಿದೆ. ಈ ಆದೇಶವು ನ್ಯಾಯಾಂಗ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ (local bodies) ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಅನ್ವಯವಾಗುತ್ತದೆ.

ಆ) ಈ ಏರಿಕೆಯಿಂದಾಗಿ ಪ್ರಸ್ತುತ ಎರಡು ವರ್ಷದಲ್ಲಿ ನಿವೃತ್ತಯಾಗಬೇಕಾಗಿದ್ದ ಸಿಬ್ಬಂದಿ ಸಂಖ್ಯೆ ಎಷ್ಟು (ಇಲಾಖಾವಾರು ಮತ್ತು ದರ್ಜೆವಾರು ವಿವರ ನಿಡುವುದು);

ವಾರ್ಷಿಕವಾಗಿ ಸರಾಸರಿ ವಿವಿಧ ದರ್ಜೆಯ 15,000 ನೌಕರರು ನಿವೃತ್ತರಾಗುತ್ತಾರೆ. ಈ ಆದೇಶದಿಂದಾಗಿ ಸುಮಾರು 30,000 ನೌಕರರ ನಿವೃತ್ತಿಯು ಎರಡು ವರ್ಷಗಳು ಮುಂದಕ್ಕೆ ಹೋಗುತ್ತದೆ.